ನಿಮ್ಮೊಡನೆ

# ವೈದ್ಯರನ್ನು ನಿಯಂತ್ರಿಸುವುದು ಹೇಗೆ?

ಈಗಾಗಲೆ ಇರುವ ಹಲವು ಕಾನೂನುಗಳು ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು, ಅವುಗಳು ಮಾಡುತ್ತಿರುವ ತಪ್ಪುಗಳನ್ನು ತಡೆಯಲು ಸಮರ್ಥವಾಗಿವೆ. ಸರ್ಕಾರ ಮತ್ತು ಜನರು ಈಗ ಇರುವ ಕಾನೂನುಗಳನ್ನೇ ಏಕೆ ಸರಿಯಾಗಿ ಬಳಸಿಕೊಳ್ಳುತ್ತಿಲ್ಲ?

ಕರ್ನಾಟಕ ಖಾಸಗಿ ವೈದ್ಯಕೀಯ ಸ್ಥಾಪನೆಗಳ (ತಿದ್ದುಪಡಿ) ಮಸೂದೆಯ ಪರ ಮತ್ತು ವಿರೋಧ ದೊಡ್ಡ ಚರ್ಚೆ ನಡೆಯುತ್ತಿದೆ. ವಿಧಾನಸಭೆಯಲ್ಲಿ ಮಂಡನೆಯಾದ ಈ ಮಸೂದೆಯನ್ನು ವೈದ್ಯರು ಖಂಡತುಂಡವಾಗಿ ವಿರೋಧಿಸುತ್ತಿದ್ದಾರೆ. ಶಾಸಕರಲ್ಲೇ ಪರ– ವಿರೋಧ ಗುಂಪುಗಳಾಗಿವೆ. ಸದ್ಯಕ್ಕೆ ತಿದ್ದುಪಡಿ ಮಸೂದೆಯನ್ನು ವಿಧಾನ ಮಂಡಲದ ಜಂಟಿ ಸದನ ಸಮಿತಿ ಪರಿಶೀಲನೆಗೆ ಒಪ್ಪಿಸಲಾಗಿದೆ. ಈ ಮಸೂದೆಯಲ್ಲಿ, ಖಾಸಗಿ ಆಸ್ಪತ್ರೆಗಳ ವರ್ಗೀಕರಣ, ವಿವಿಧ ಚಿಕಿತ್ಸಾ ವಿಧಾನ ಮತ್ತು ಸೇವೆಗಳಿಗೆ ದರ ನಿಗದಿ ಹಾಗೂ ರೋಗಿಗಳ ದೂರು ಪರಿಹಾರ ಸಮಿತಿಗಳ ರಚನೆ ಮುಂತಾದ ಕ್ರಮಗಳನ್ನು ಸೂಚಿಸಲಾಗಿದೆ. ಆರೋಗ್ಯ ಸಚಿವರು ವಿಧಾನಸಭೆಯಲ್ಲಿ ಪ್ರಕಟಿಸಿದ ಪ್ರಕಾರ, ಖಾಸಗಿ ಆಸ್ಪತ್ರೆಯ ರೋಗಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಈ ತಿದ್ದುಪಡಿ ಮಸೂದೆ ತರಲಾಗಿದೆ. ಆದರೆ ಮಸೂದೆಯನ್ನು ವಿರೋಧಿಸುತ್ತಿರುವ ವೈದ್ಯರ ಪ್ರಕಾರ, 'ಈ ಮಸೂದೆ ಜಾರಿಗೆ ಬಂದರೆ ರೋಗಿಗಳ ಹಿತಾಸಕ್ತಿಗೇ ಧಕ್ಕೆಯಾಗಲಿದೆ. ಆಸ್ಪತ್ರೆಗಳ ವೈದ್ಯರಿಗೆ ಮತ್ತು ಸಿಬ್ಬಂದಿಗೆ ಕಿರುಕುಳ ಕೊಡುವುದು ಹೆಚ್ಚಾಗಲಿದ್ದು, ಇನ್ನೊಂದು ರೂಪದಲ್ಲಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡಲಿದೆ.'

ಜನರ ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ತೀರಾ ಸೂಕ್ಷ್ಮ ಸಂಗತಿಯಿದು. ಎರಡೂ ಕಡೆಯ ವಾದಗಳಲ್ಲಿ ತಥ್ಯವೂ ಇದೆ; ಮಿಥ್ಯೆಯೂ ಇದೆ. 'ಎಲ್ಲ ವೈದ್ಯರೂ ರಕ್ಕಸರು; ಎಲ್ಲ ಖಾಸಗಿ ಆಸ್ಪತ್ರೆಗಳೂ ಸುಲಿಗೆಯ ತಾಣಗಳು' ಎಂಬಂತೆ ಅಧಿಕಾರಸ್ಥರು ವಾದಿಸಿದರೆ ಒಪ್ಪಲಾಗದು. ಖಾಸಗೀಕರಣಕ್ಕೆ ಪ್ರೋತ್ಸಾಹ ನೀಡುವುದು ಸರ್ಕಾರದ ನೀತಿಯೇ ಆಗಿದೆ. ಆರೋಗ್ಯ ವಿಮಾ ಯೋಜನೆ ಸಹಿತ ಸರ್ಕಾರದ ವಿವಿಧ ಬಗೆಯ ಪ್ರೋತ್ಸಾಹದಿಂದಲೇ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು ಇವತ್ತು ತಲೆಯೆತ್ತಿವೆ. ದುಬಾರಿ ಔಷಧಿಗಳು, ದುಬಾರಿ ಚಿಕಿತ್ಸೆಗಳು ಜನಸಾಮಾನ್ಯರ ಕೈಯಳತೆ ಮೀರಿ ಬೆಳೆಯುತ್ತಿವೆ. ಈಗ ಖಾಸಗಿ ಉದ್ಯಮವನ್ನು ನಿಯಂತ್ರಿಸಲು ನಿಜ ಇಚ್ಛೆ ಸರಕಾರಕ್ಕೆ ಇದ್ದರೆ, ಮೊದಲು ಸರ್ಕಾರಿ ವೈದ್ಯಕೀಯ ಸಂಸ್ಥೆಗಳನ್ನು ಬಲಗೊಳಿಸಬೇಕು. ಅವು ಖಾಸಗಿ ಆಸ್ಪತ್ರೆಗಳಿಗೆ ಸೂಕ್ತ ಸ್ಪರ್ಧೆ ನೀಡುವಂತಾಗಬೇಕು.

ಇಲ್ಲಿ ಖಾಸಗಿ ಆಸ್ಪತ್ರೆಗಳು ಮಾಡುತ್ತಿರುವುದೆಲ್ಲ ಸರಿ ಎನ್ನುವುದಿಲ್ಲ. ಈಗಾಗಲೆ ಇರುವ ಹಲವು ಕಾನೂನುಗಳು ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು, ಅವುಗಳು ಮಾಡುತ್ತಿರುವ ತಪ್ಪುಗಳನ್ನು ತಡೆಯಲು ಸಮರ್ಥವಾಗಿವೆ. ಸರ್ಕಾರ ಮತ್ತು ಜನರು ಈಗ ಇರುವ ಕಾನೂನುಗಳನ್ನೇ ಏಕೆ ಸರಿಯಾಗಿ ಬಳಸಿಕೊಳ್ಳುತ್ತಿಲ್ಲ? ಇರುವ ಕಾನೂನುಗಳನ್ನೇ ಸಮರ್ಥವಾಗಿ ಬಳಸಿ, ಆಡಳಿತವನ್ನು ಇನ್ನಷ್ಟು ಬಿಗಿಗೊಳಿಸಿ ಮಾಡಲಾಗದ ಕೆಲಸವನ್ನು ಕಾನೂನು ತಿದ್ದುಪಡಿಯ ಮೂಲಕ ಮಾಡಲು ಸಾಧ್ಯವಾಗಬಹುದೆ.. ಎನ್ನುವುದಷ್ಟೇ ಪ್ರಶ್ನೆ.

'ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳ ಸುಲಿಗೆ ನಡೆಯುತ್ತಿದೆ, ಸರ್ಕಾರಿ ವೈದ್ಯರ ಖಾಸಗಿ ಪ್ರಾಕ್ಟೀಸ್‌ಅನ್ನೂ ಸರ್ಕಾರ ಸಮರ್ಥವಾಗಿ ನಿಯಂತ್ರಿಸುತ್ತಿಲ್ಲ ' ಎನ್ನುವ ದೂರುಗಳು ಹಿಂದಿನಿಂದಲೂ ಇವೆ. ಕೆಲವೆಡೆ ರೋಗಿಗಳ ಮರಣ ಸಂಭವಿಸಿದಾಗ ರೋಗಿಗಳ ಕಡೆಯವರು ಆಸ್ಪತ್ರೆಯ ಸಿಬ್ಬಂದಿ ಮತ್ತು ವೈದ್ಯರ ಮೇಲೆ ಹಲ್ಲೆ ನಡೆಸಿದ ಪ್ರಕರಣಗಳೂ ನಡೆದಿವೆ. ಇಂತಹ ಪ್ರಕರಣಗಳು ಸರ್ಕಾರಿ ಆಸ್ಪತ್ರೆಗಳಲ್ಲೇ ಹೆಚ್ಚು ನಡೆಯುತ್ತಿವೆ. ಸರ್ಕಾರ ಖಾಸಗಿ ಆಸ್ಪತ್ರೆಗಳ ಮೇಲೆ ನಿಯಂತ್ರಣ ಸಾಧಿಸುವ ಭರದಲ್ಲಿ, ಇದು ಇಡೀ ವೈದ್ಯಲೋಕವನ್ನು ಬಾಧಿಸುತ್ತಿರುವ ಸಮಸ್ಯೆ ಎನ್ನುವುದನ್ನು ಮರೆಯಬಾರದು. ಸರ್ಕಾರಿ ಆಸ್ಪತ್ರೆಗಳ ಕಾರ್ಯನಿರ್ವಹಣೆಯ ಮೇಲೆ ಸರ್ಕಾರಕ್ಕೆ ಪೂರ್ಣ ನಿಯಂತ್ರಣ ಏಕೆ ಇಲ್ಲವಾಗಿದೆ? ಅಲ್ಲಿ ನಡೆಯುತ್ತಿರುವ ಲಂಚಾವತಾರವನ್ನು ಏಕೆ ನಿಲ್ಲಿಸಲು ಸಾಧ್ಯವಾಗಿಲ್ಲ? ದೆಹಲಿಯ ಏಮ್ಸ್‌ನಂತಹ ಅಥವಾ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯಂತಹ ಅತ್ಯುತ್ತಮ ಸರ್ಕಾರಿ ಸಂಸ್ಥೆಗಳನ್ನು ಕಟ್ಟಿದರೆ, ಜನರೇಕೆ ಖಾಸಗಿ ಆಸ್ಪತ್ರೆಗಳತ್ತ ಮುಖ ಮಾಡುತ್ತಾರೆ?

ಸರ್ಕಾರಿ ವೆಚ್ಚದಲ್ಲಿ ಚಿಕಿತ್ಸೆ ಪಡೆಯುವ ಶಾಸಕರು ಮತ್ತು ಸಚಿವರು ಕಡ್ಡಾಯವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ದಾಖಲಾಗಬೇಕು ಎಂಬ ಕಾನೂನು ತನ್ನಿ. ಆಗ ಸರ್ಕಾರಿ ಆಸ್ಪತ್ರೆಗಳ ಸ್ಥಿತಿ ತನ್ನಷ್ಟಕ್ಕೇ ಸುಧಾರಿಸುತ್ತದೆ. ಸರ್ಕಾರ ಮೊದಲು ಮಾಡಬೇಕಿರುವುದು ಸರ್ಕಾರಿ ಆಸ್ಪತ್ರೆಗಳ ನಿಯಂತ್ರಣ. ಅದರಲ್ಲಿ ಯಶಸ್ವಿಯಾದರೆ ಖಾಸಗಿ ಆಸ್ಪತ್ರೆಗಳು ತನ್ನಿಂದತಾನೇ ದುಬಾರಿ ಶುಲ್ಕಗಳನ್ನು ಕಡಿಮೆ ಮಾಡಿ, ಸೇವೆಯ ಗುಣಮಟ್ಟವನ್ನು ಹೆಚ್ಚಿಸುತ್ತವೆ. ಇತ್ತೀಚೆಗೆ ಜೆನರಿಕ್ ಔಷಧಿ ಮಳಿಗೆಗಳು ಹೆಚ್ಚಾದಂತೆ ಜನರು ಖಾಸಗಿ ಮೆಡಿಕಲ್ ಸ್ಟೋರ್‌ಗಳತ್ತ ಮುಖ ಮಾಡುವುದನ್ನು ಕಡಿಮೆ ಮಾಡಿಲ್ಲವೆ? ಆನ್‌ಲೈನ್ ವಹಿವಾಟಿನಲ್ಲಿ ಔಷಧಿಗಳಿಗೆ ಸಿಗುತ್ತಿರುವ ದರಕಡಿತಗಳ ಸೌಲಭ್ಯವನ್ನು ಜನರು ಸದ್ಬಳಕೆ ಮಾಡಿಕೊಳ್ಳುತ್ತಿಲ್ಲವೆ?

■ ಬಿ.ಎಂ.ಹನೀಫ್

